ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
KARNATAK UNIVERSITY DHARWAD
ಸಿಬ್ಬಂದಿ ಹಾಗೂ ಆಡಳಿತ ಸುಧಾರಣಾ ವಿಭಾಗ
D.P.A.R.
Email: dparkud@gmail.com

NAAC Accredited with "A" Grade-2022

ಸ್ವಾತಂತ್ರ್ಯದ ಅಮೃತ ಮಹೋತ್ಸವ
ಪಾವಟೆನಗರ, ಧಾರವಾಡ–580003
ದೂರವಾಣಿ ಸಂ.0836-2215349
Website : www.kud.ac.in

ಅ.ನಂ.ಕವಿವಿ/ಸಿಆಸುವಿ/ಶಿಕ್ಷಕೇತರ/10/2026/ ದಿನಾಂಕ:

## ಸುತ್ತೋಲೆ

ವಿಷಯ : ವಿಶ್ವವಿದ್ಯಾಲಯದಲ್ಲಿನ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿವಿಧ ವೃಂದದ ಖಾಯಂ ನೌಕರರ ಜೇಷ್ಠತಾ ಪಟ್ಟಿ ಪ್ರಕಟಿಸುವ ಕುರಿತು.

ಉಲ್ಲೇಖ : 1. ಸುತ್ತೋಲೆ ಸಂಖ್ಯೆ: KU/DPAR/NT-4/2019/3008 ದಿನಾಂಕ.13.08.2019
2. ಸುತ್ತೋಲೆ ಸಂಖ್ಯೆ ಕವಿವಿ/ಸಿಆಸುವಿ/ಶಿಕ್ಷಕೇತರ/10/2025/165 ದಿನಾಂಕ:23.04.2025
3. ಕುಲಪತಿಗಳ ಅನುಮೋದನೆ ದಿನಾಂಕ : 04.06.2026

***

ಉಲ್ಲೇಖ 1 ರ ಪ್ರಕಾರ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗೆಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸಿರುವ ವಿಧೇಯಕ, 2017 ಮತ್ತು ದಿನಾಂಕ.24.06.2019 ರ ಸರ್ಕಾರದ ಸುತ್ತೋಲೆ ಪ್ರಕಾರ ಪರಿಶೀಲಿಸಲಾಗಿರುತ್ತದೆ ಹಾಗೂ ಜೇಷ್ಠತಾ ಪಟ್ಟಿಯಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿ ಪ್ರತಿಯೊಂದು ವೃಂದದಲ್ಲಿ ಪಾಲನೆ ಮಾಡಿ ಮೇಲಿನ ದಿನಾಂಕಗಳಂತೆ ಪರಿಶೀಲನೆ ಮಾಡಿ ದಿನಾಂಕ: 07.08.2019 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ರಿಕ್ತ ಸ್ಥಾನಗಳ ಎದುರಾಗಿ ನೀಡಲಾಗಿದ್ದ ಮುಂಬಡ್ತಿಗಳನ್ನೊಳಗೊಂಡು ಪರಿಷ್ಕೃತ ಜೇಷ್ಠತಾ ಪಟ್ಟಿಗೆ ಅನುಮೋದನೆಯನ್ನು ಪಡೆದು, ಅದರಂತೆ, ಸುತ್ತೋಲೆ ದಿನಾಂಕ.13.08.2019, 01.02.2021 ರಂದು ಮತ್ತು 23.04.2025 ರ ಮುಖಾಂತರ ಪರಿಷ್ಕೃತ ಅಂತಿಮ ಜೇಷ್ಠತಾ/ ಸಿಬ್ಬಂದಿಗಳ ಪಟ್ಟಿಯನ್ನು ವಿಶ್ವವಿದ್ಯಾಲಯದ ಅಂತರ್ಜಾಲ www.kud.ac.in ದಲ್ಲಿ ಪ್ರಕಟಪಡಿಸಲಾಗಿದ್ದು ಇರುತ್ತದೆ.

ಅದರಂತೆ, ತದನಂತರದಲ್ಲಿ ಕಾಲ ಕಾಲಕ್ಕೆ ಹೊರಡಿಸಲಾಗಿರುವ ಸರ್ಕಾರಿ ಆದೇಶ ಮತ್ತು ಸುತ್ತೋಲೆಗಳಂತೆ ವಿವಿಧ ವೃಂದದ ಹುದ್ದೆಗಳಿಗೆ ಖಾಲಿಯಾದಂತೆ ಶಿಕ್ಷಕೇತರ ನೌಕರರಿಗೆ ಪದೋನ್ನತಿ ನೀಡುತ್ತಾ ಬಂದಿದ್ದು ಇರುತ್ತದೆ. ಪ್ರಸಕ್ತ ದಿನಾಂಕ.01.01.2026 ರಲ್ಲಿ ಇದ್ದಂತೆ ಕವಿವಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವೃಂದದ ಶಿಕ್ಷಕೇತರ ಖಾಯಂ ನೌಕರರ ಜೇಷ್ಠತಾ/ ಸಿಬ್ಬಂದಿಗಳ ಯಾದಿಯನ್ನು ವಿಶ್ವವಿದ್ಯಾಲಯದ ಅಂತರ್ಜಾಲ ವಿಳಾಸ www.kud.ac.in ರಲ್ಲಿ ಪ್ರಕಟಿಸಲಾಗಿದೆ ಎಂಬುದನ್ನು ಎಲ್ಲ ಸಿಬ್ಬಂದಿಗಳ ಗಮನಕ್ಕೆ ತರಲಾಗಿದೆ. ಸದರ ಯಾದಿಯಲ್ಲಿ ದಿನಾಂಕ, ಹುದ್ದೆ ಇತರೆ ಏನಾದರೂ ತಪ್ಪು/ ತಿದ್ದುಪಡಿಗಳು ಕಂಡುಬಂದಲ್ಲಿ ಈ ಸುತ್ತೋಲೆ ಹೊರಡಿಸಿದ 10 ದಿನಗಳ ಒಳಗಾಗಿ ಲಿಖಿತವಾಗಿ ಮನವಿ ಸಲ್ಲಿಸಿದಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

ಕುಲಸಚಿವರು

ಗೆ,

ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ವಿಭಾಗ, ಕವಿವಿ, ಧಾರವಾಡ. ಮುಂದುವರೆದು, ಇದರೊಂದಿಗೆ ಲಗತ್ತಿಸಿದ ವಿವಿಧ ವೃಂದದ ಶಿಕ್ಷಕೇತರ ನೌಕರರ ಜೇಷ್ಠತಾ ಪಟ್ಟಿಯನ್ನು ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ತಕ್ಷಣವೇ ಪ್ರಕಟಿಸುವ ಬಗ್ಗೆ ಕ್ರಮವಹಿಸುವುದು.